## ಸಣ್ಣ ಕಥೆಗಳು

# ಮಸುಕು...



**ಎಸ್. ಶೇಷಾದ್ರಿ, ಕಿನಾರ**

ಕಲೆ: ರಾಮಕೃಷ್ಣ ಸಿದ್ರಪಾಲ

ಅವಳ ಮನೆ ದೊಡ್ಡ ಮನೆಯ ಗೋಡೆಗೆ ಅಂಟಿಕೊಂಡಿತ್ತು - ಚಾಡಿ ಹೇಳುವ ನಾಲಗೆ ಚಾಚಿಕೊಂಡ ಹಾಗೆ! ಆ ಕೋಣೆಯ ಗೋಡೆಗೆ ಮಳೆಗೆ ತೂಗು ಹಾಕಿದ ಕನ್ನಡಿ ಹೊಳಪು ಕಳೆದುಕೊಂಡಿತ್ತು. ಕನ್ನಡಿಯ ಕಟ್ಟು ಜಿರಲೆ, ಜಿಂಡಿಂಗ ಇತ್ಯಾದಿಗಳ ಬಾಯಿಗೆ ಸಿಕ್ಕು ಬಣ್ಣ ಕಳೆದುಕೊಂಡು ಲಡ್ಡಾಗಿ ಯಾವಾಗ ಬೇಕಾದರೂ ಆ ಕಟ್ಟನ್ನು ಬಂಧನದಿಂದ ಬಿಡುಗಡೆ ಪಡೆದು ನೆಲಕ್ಕೆ ಅಂದರೆ ಸೆಗಣಿಯ ಹೆಪಳಿಕೆ ಎದ್ದು ಮಳೆ ನೀರು ಸೋರಿ ತಾತಾ ತೂತಾಗಿದ ಪುಟ್ಟ ಪುಟ್ಟ ಗುಂಡಿಗಳ ಮೇಲೆ ಬಿದ್ದು ಒಡೆಯಬಹುದು. ಅಲ್ಲದೇ ತೂಗು ಹಾಕಿಸಿಕೊಂಡ ಕಬ್ಬಿಣದ ಮೊಳೆ ತಾನು ನೆಚ್ಚಿಕೊಂಡು, ಕಚ್ಚಿಕೊಂಡಿದ್ದ ಗೋಡೆಯಿಂದ ಜಿಗಿದು ಬಿಡಲು ತಯಾರಾಗಿದ್ದರಿಂದ ಅದಕ್ಕೆ ಕನ್ನಡಿಯ ಒಪ್ಪಿಗೆಯೇನೂ ಬೇಕಾಗಿರಲಿಲ್ಲ. ಮಾಡಿನ ಸಂದಿಯಿಂದ ಬಿದ್ದ ಬಿಸಿಲುಕೋಲು ನೆಲಕ್ಕೆ ಬರೆ ಹಾಕಿದಂತೆ ಕಂಡರೆ, ಗೋಡೆಯ ಮೇಲೆ ಇಳಿದಿದ್ದ ಮಳೆಗಾಲದ ನೀರು ಸಿಕ್ಕಾಪಟ್ಟೆ ಕಲೆಯನ್ನುಂಟು ಮಾಡಿ ಗೋಡೆಯ ಬಣ್ಣವನ್ನು ಕುಲಗೆಡಿಸಿದ್ದವು. ಆ ಮನೆಯಲ್ಲಿ ಅನೇಕ ಗೊದ್ದಗಳು, ಜಿರಲೆ, ಹಲ್ಲಿ, ಇಲಿಗಳು ಇದ್ದವು. ಅವು ಒಂದನ್ನೊಂದು ನಂಬಿ ಬದುಕುತ್ತಿದ್ದವು. ಹೊರಗಿನ ಗಾಳಿ ಸಹ ಮನೆಯೊಳಗೆ ದೂಳನ್ನು ಎರಚಿ ನೆಲವನ್ನು ಇನ್ನಷ್ಟು ಕೊಳೆ ಮಾಡಿ ಹೋಗುತ್ತಿತ್ತು. ಆಗ ಆಕೆ ಕನ್ನಡಿಯಲ್ಲಿ ದಿನದ ಎಷ್ಟನೇ ಬಾರಿಯೋ ಮುಖ ನೋಡಿಕೊಂಡು ಮುಖದ ಮೇಲಿನ ಇನ್ನೊಂದು ಹೊಸ ನೆರಿಗೆಯನ್ನು ಸವರಿ, ಕಣ್ಣಿನ ಸುತ್ತ ಕಪ್ಪು ಜಾಸ್ತಿಯಾದುದರಿಂದ-ಎಂದು ಹಳೇ ಪೌಡರ್ ಡಬ್ಬಿಯಲ್ಲಿ ಅಳಿದುಳಿದ ಪೌಡರನ್ನು- ಆ ಮುಖವನ್ನು ತಿದ್ದಿ ತೀಡಲು ಎಡ ಅಂಗೈ ಮೇಲೆ ಚಿಮಿಕಿಸಿಕೊಂಡು ಕನ್ನಡಿ ಅಲ್ಲಿ ಏನೂ ಕಾಣದೇ ಸುಮ್ಮನೇ ನಕ್ಕಳು.

ಬೀದಿ ಬಾಗಿಲಲ್ಲಿ ಇಣಕಿ ಅನೇಕ ವರುಷಗಳ ಹಿಂದೆ ತಾನು ಈ ಬೀದಿಗೆ ರಾಣಿಯಾಗಿ ತಿರುಗುತ್ತಿದ್ದಾಗ ಅನೇಕಾನೇಕ ಮಂದಿ ನೋಡಿದ್ದನ್ನ, ಸಿನಿಮಾ ಟಾಕೀಸಿನ ಗಾಡಿಯೊಂದು 'ಇಂದೇ ಕಡೇ ಆಟ.... ನೋಡಲು ಮರೆಯದಿರಿ.. ನೋಡಿ ಆನಂದಿಸಿರಿ' ಎಂದು ಸಾರಿ ಕೂಗಿಕೊಂಡು ಹೋಗುತ್ತಿದ್ದುದನ್ನು, ಆ ಕಡೇ ಆಟಕ್ಕೆ, ಎರಡನೇ ಆಟಕ್ಕೆ ಬಾಲ್ಕನಿಗೆ ಕರೆದುಕೊಂಡು ಹೋಗಿ, ಮೆತ್ತಗಿನ ಸೀಟಿನಲ್ಲಿ ಕೂರಿಸಿ, ತನ್ನ ಹೆರಳು ತುಂಬಾ ಮುಡಿದ ಮಲ್ಲಿಗೆಯ ವಾಸನೆಯನ್ನು ಮೂಸುತ್ತಾ ಪರದೆಯ ಮೇಲಿನ ಆಟ ನೋಡುತ್ತಾ, ನಾಯಕ-ನಾಯಕಿಯರ ಹಾಡು, ಪ್ರೇಮ ಪ್ರೀತಿಗಳು, ಹುಸಿ ಜಗಳಗಳು ಖಳನಾಯಕನೊಡನೆ ನಟಿಸುವ ಫೈಟಿಂಗ್ ಏನೆಲ್ಲ ನೋಡಿ ಸಂತೋಷ ಪಟ್ಟು ಶಿಳ್ಳೆ ಹಾಕಿ ಕೇಳಗಿನವರು, ಅಕ್ಕಪಕ್ಕದವರೆಲ್ಲ ಅಲೆ ಅಲೆಯಾಗಿ ಬರುವ ಶಿಳ್ಳೆಗೆ ತಿರುಗಿ ನೋಡುವಂತೆ